ಜೀವಮಾನಕಾಲದಲ್ಲೇ ನೀವೊಬ್ಬ ಜೀವಂತ ದೇವರಾಗುವ ಸಂಭವವಿದೆ. ಅದು ಹೀಗಿರುವುದು ನನಗೆ ಸಂತೋಷ. ನಮಗೆ ಭರತಖಂಡದಲ್ಲಿ ಬೇಕಾಗಿರುವುದು ಇದೊಂದೇ. ಹಿಂದೂಗಳಲ್ಲಿ ಎಷ್ಟೋ ಪಂಥಗಳಿವೆ. ಅವುಗಳಲ್ಲಿ ಕೆಲವು ತೋರಿಕೆಗೆ ಪರಸ್ಪರ ವಿರೋಧವಾಗಿ ಕಾಣುವುವು. ಆದರೆ ಅವೆಲ್ಲ ಒಂದೇ ಧರ್ಮದ ಅಭಿವ್ಯಕ್ತಿಗಳೆಂದು ಅವರು ಹೇಳುವರು. "ಹಲವು ನದಿಗಳು ಬೇರೆ ಬೇರೆ ಪರ್ವತಗಳಲ್ಲಿ ಜನಿಸಿ, ನೇರವಾಗಿಯೋ ವಕ್ರವಾಗಿಯೋ ಹರಿದು, ಕೊನೆಗೆ ಎಲ್ಲವೂ ಸಾಗರದಲ್ಲಿ ಸಂಗಮವಾಗುವಂತೆ, ಬೇರೆ ಬೇರೆ ದೃಷ್ಟಿಯುಳ್ಳ ಹಲವು ಪಂಗಡಗಳು ಕೊನೆಗೆ ನಿನ್ನೆಡೆಗೆ ಬರುವವು." ಇದೊಂದು ಸಿದ್ಧಾಂತವಾದರೆ ಸಾಲದು. ನಾವು ಇದನ್ನು ಸ್ವೀಕರಿಸಬೇಕು. ಆದರೆ ಕೆಲವರು ಅನುಗ್ರಹ ತೋರಿಸುವಂತೆ ವರ್ತಿಸುತ್ತ, "ನಿಜ, ಆ ಧರ್ಮದಲ್ಲಿ ಹಲವು ಒಳ್ಳೆಯ ವಿಷಯಗಳಿವೆ. ಇದನ್ನೇ ನಾವು ಜನಾಂಗೀಯ ಧರ್ಮಗಳು ಎಂದು ಕರೆಯುವೆವು. ಇವುಗಳಲ್ಲಿಯೂ ಕೆಲವು ಒಳ್ಳೆಯ ವಿಷಯಗಳಿವೆ" ಎಂದು ಹೇಳುವುದು ಸರಿಯಲ್ಲ. ಮತ್ತೆ ಕೆಲವರಲ್ಲಿ ಅತಿ ವಿಚಿತ್ರ ಔದಾರ್ಯವಿದೆ; ಉಳಿದ ಧರ್ಮಗಳೆಲ್ಲ ಇತಿಹಾಸಪೂರ್ವದ ಅವಶೇಷಗಳು. ಆದರೆ ನಮ್ಮದು ಧರ್ಮದ ಪರಾಕಾಷ್ಠೆ ಎಂದು ಅವರು ಭಾವಿಸುವರು. ಆದರೆ ಒಬ್ಬನು ತನ್ನದು ಅತಿ ಪುರಾತನ ಧರ್ಮ, ಆದಕಾರಣ ಅದು ಅತ್ಯುತ್ತಮ ಎನ್ನುವನು. ಮತ್ತೊಬ್ಬನು ತನ್ನದು ಅತ್ಯಾಧುನಿಕ, ಆದಕಾರಣ ಇದು ಅತ್ಯುತ್ತಮ ಎಂದು ಅನಿಸಿಕೊಳ್ಳಲಿಕ್ಕೆ ಅಧಿಕಾರವಿದೆಯೆನ್ನುವನು. ಪ್ರತಿಯೊಂದು ಧರ್ಮದಲ್ಲಿಯೂ ಮತ್ತೊಂದರಲ್ಲಿರುವಷ್ಟೇ ಮಾನವನನ್ನು ಉದ್ಧಾರ ಮಾಡುವ ಶಕ್ತಿಯಿದೆ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕು. ಇದಕ್ಕೆ ವಿರುದ್ಧವಾಗಿ ದೇವಸ್ಥಾನದಲ್ಲಿ ಅಥವಾ ಚರ್ಚಿನಲ್ಲಿ ನಾವು ಯಾವ ಅಭಿಪ್ರಾಯಗಳನ್ನು ಕೇಳುತ್ತೇವೆಯೋ, ಅವೆಲ್ಲ ಮೂಢನಂಬಿಕೆಗಳ ರಾಶಿ.


ದೇವರೊಬ್ಬನೇ ಎಲ್ಲರಿಗೂ ಜವಾಬ್ದಾರನು. ಮಾನವಾತ್ಮದ ಸ್ವಲ್ಪಮಟ್ಟಿನ ಉದ್ಧಾರಕ್ಕಾದರೂ, ನೀವು, ನಾನು ಅಥವಾ ಮತ್ತಾರೂ ಹೊಣೆಗಾರರಲ್ಲ, ಸರ್ವಶಕ್ತನಾದ ಈಶ್ವರನೊಬ್ಬನೇ ಇದಕ್ಕೆ ಹೊಣೆಗಾರ. ದೇವರನ್ನು ನಂಬುವೆವು ಎನ್ನುವರು. ಅದರ ಜೊತೆಗೆ 'ಎಲ್ಲೋ ಕೆಲವರಿಗೆ ಅವನು ಸತ್ಯವನ್ನೆಲ್ಲಾ ಕೊಟ್ಟುಬಿಟ್ಟಿರುವನು, ಅವರು ಉಳಿದ ಮಾನವಕೋಟಿಯ ರಕ್ಷಕರು' ಎನ್ನುವುದು ನನಗೆ ಅರ್ಥವಾಗುವುದಿಲ್ಲ. ಇದನ್ನು ನೀವು ಧರ್ಮ ಎಂದು ಹೇಗೆ ಹೇಳುತ್ತೀರಿ? ಸಾಕ್ಷಾತ್ಕಾರವೇ ಧರ್ಮ. ಬರಿಯ ಮಾತು, ಯಾವುದನ್ನೋ ನಂಬುವುದು, ಅಂಧಕಾರದಲ್ಲಿ ಅರಸುವುದು, ಪೂರ್ವಿಕರಿಂದ ಬಂದ ಕೆಲವು ಮಂತ್ರಗಳನ್ನು ಅರಗಿಳಿಯಂತೆ ಉಚ್ಚರಿಸುವುದು, ಧಾರ್ಮಿಕ ಸತ್ಯಕ್ಕೆ ರಾಜಕೀಯ ಮೆರುಗು ಕೊಡುವುದು – ಇವೂ ಎಂದಿಗೂ ಧರ್ಮವಲ್ಲ, ಎಲ್ಲಾ ಕೋಮುಗಳಲ್ಲಿಯೂ, ಅತಿ ಪ್ರತ್ಯೇಕರೆಂದು ನಾವು ಭಾವಿಸುವ ಮಹಮ್ಮದೀಯರಲ್ಲಿಯೂ, ಧರ್ಮದ ಸಾಕ್ಷಾತ್ಕಾರಕ್ಕೆ ಪ್ರಯತ್ನಿಸುತ್ತಿರುವಾಗ ಅವರ ಬಾಯಿಂದ ಈ ಉಜ್ವಲ ಪದಗಳು ಹೊರಟಿವೆ: "ನೀನೇ ಎಲ್ಲರಿಗೂ ಈಶ್ವರ; ನೀನೇ ಲೋಕ ಗುರು, ನಮಗಿಂತ ಹೆಚ್ಚು ನೀನು. ನಿನ್ನ ಮಕ್ಕಳ ದೇಶವನ್ನು ಪ್ರೀತಿಸುವೆ." ಯಾರ ಶ್ರದ್ಧೆಯನ್ನೂ ವಿಚಲಿತಗೊಳಿಸಬೇಡಿ. ಸಾಧ್ಯವಾದರೆ ಇರುವುದಕ್ಕಿಂತ ಉತ್ತಮವಾದುದನ್ನು ಅವರಿಗೆ ಕೊಡಿ. ಸಾಧ್ಯವಾದರೆ ಅವನಿರುವ ಸ್ಥಳವನ್ನು ತಿಳಿದು ಮುಂದಕ್ಕೆ ಹೋಗುವುದಕ್ಕೆ ಸಹಾಯ ಮಾಡಿ. ಆದರೆ ಅವನಲ್ಲಿರುವುದನ್ನು ನಾಶಮಾಡಬೇಡಿ. ಕ್ಷಣದಲ್ಲಿ ಸಹಸ್ರಾರು ಮಂದಿಯಂತೆ ಯಾವನು ಆಗಬಲ್ಲನೊ ಆತನೇ ನಿಜವಾದ ಗುರು. ತಕ್ಷಣವೇ ಶಿಷ್ಯನ ಮಟ್ಟಕ್ಕೆ ಇಳಿದುಬಂದು, ತನ್ನ ಶಕ್ತಿಯನ್ನು ಅವನಿಗೆ ಕೊಟ್ಟು, ಅವನ ಕಣ್ಣಿನ ಮೂಲಕ ನೋಡಬಲ್ಲ, ಕಿವಿಯ ಮೂಲಕ ಕೇಳಬಲ್ಲ, ಅವನ ಮನಸ್ಸಿನ ಮೂಲಕ ಅರಿಯಬಲ್ಲವನೇ ನಿಜವಾದ ಗುರು. ಅಂತಹ ಗುರುವೇ ನಿಜವಾಗಿ ಉಪದೇಶಮಾಡಬಲ್ಲ, ಇತರರಲ್ಲ. ಜಗತ್ತಿನಲ್ಲಿ ನಿಷೇಧಾತ್ಮಕ ಮಾರ್ಗವನ್ನು ಅನುಸರಿಸುವ ಯಾರೂ ಜಗತ್ತಿಗೆ ಹಿತವನ್ನು ಮಾಡಲಾರರು.

ಅವರು ಜನರಿಗೆ ಉಪದೇಶ ನೀಡುತ್ತಾ ಹೋದರು. ಅವರ ದೇಹ ಬಹಳ ಬೇಗ ಬಿದ್ದು ಹೋಗಬಹುದೆಂಬ ಸುದ್ದಿ ಹಬ್ಬತೊಡಗಿತು. ಎಂದಿಗಿಂತಲೂ ಹೆಚ್ಚಾಗಿ ಜನರು ಬರಲು ಮೊದಲಾಯಿತು. ಭರತಖಂಡದಲ್ಲಿ ಮಹಾ ದೈವಭಕ್ತರನ್ನು ನೋಡಲು ಜನರು ಹೇಗೆ ಬರುತ್ತಾರೆ, ಅವರ ಸುತ್ತಲೂ ಮುತ್ತಿ, ಅವರು ಬದುಕಿರುವಾಗಲೇ ಅವರನ್ನು ಹೇಗೆ ದೇವರಂತೆ ಭಾವಿಸುತ್ತಾರೆ ಎಂಬುದನ್ನು ನೀವು ಊಹಿಸಲಾರಿರಿ. ಅವರ ವಸ್ತ್ರದ ತುದಿಯನ್ನು ಮುಟ್ಟಲು ಸಹಸ್ರಾರು ಜನರು ಕಾದು ನಿಂತಿರುತ್ತಾರೆ. ಇತರರಲ್ಲಿ ಆಧ್ಯಾತ್ಮಿಕತೆಯನ್ನು ಗೌರವಿಸುವುದರಿಂದಲೇ ನಮ್ಮಲ್ಲಿ ಆಧ್ಯಾತ್ಮಿಕತೆ ಉದ್ಭವಿಸುವುದು. ಯಾವುದು ಮನುಷ್ಯನಿಗೆ ಬೇಕೋ, ಯಾವುದನ್ನು ಅವನು ಗೌರವಿಸುತ್ತಾನೆಯೋ ಅದನ್ನು ಪಡೆಯುವನು. ರಾಷ್ಟ್ರವೂ ಹೀಗೆಯೇ. ನೀವು ಭರತಖಂಡಕ್ಕೆ ಹೋಗಿ ರಾಜಕೀಯ ಉಪನ್ಯಾಸವನ್ನು ಕೊಟ್ಟರೆ, ಅದು ಎಷ್ಟೇ ಮನೋರಂಜಕವಾಗಿದ್ದರೂ, ಅದನ್ನು ಕೇಳುವುದಕ್ಕೆ ಸಭಿಕರೇ ಇರುವುದಿಲ್ಲ. ಹೋಗಿ ಧರ್ಮವನ್ನು ಬೋಧಿಸಿ; ಮಾತನಾಡುವುದು ಮಾತ್ರವಲ್ಲ, ಅದರಂತೆ ಬಾಳಿ. ನಿಮ್ಮ ದರ್ಶನ ಮಾಡಲು, ಪಾದಗಳನ್ನು ಮುಟ್ಟಲು, ನೂರಾರು ಜನರು ನೆರೆಯುವರು. ಜನರು ಈ ಮಹಾಪುರುಷ ಬೇಗ ತಮ್ಮಿಂದ ಕಣ್ಮರೆಯಾಗುವನೆಂಬುದನ್ನು ಕೇಳಿ ಎಂದಿಗಿಂತಲೂ ಹೆಚ್ಚಾಗಿ ಬರತೊಡಗಿದರು. ನನ್ನ ಗುರು ಆರೋಗ್ಯವನ್ನು ಸ್ವಲ್ಪವೂ ಗಮನಿಸದೆ ಉಪದೇಶ ಮಾಡುತ್ತ ಹೋದರು. ನಮಗೆ ಇದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಹಲವು ಜನರು ಬಹಳ ದೂರದಿಂದ ಬರುತ್ತಿದ್ದರು. ಅವರ ಪ್ರಶ್ನೆಗಳನ್ನು ಬಗೆಹರಿಸುವವರೆಗೂ ಇವರು ಶಾಂತರಾಗುತ್ತಿರಲಿಲ್ಲ. "ಎಲ್ಲಿಯವರೆಗೆ ನನಗೆ ಮಾತನಾಡುವುದು ಸಾಧ್ಯವೋ, ಅಲ್ಲಿಯವರೆವಿಗೂ ಉಪದೇಶ ಮಾಡುವೆನು" ಎನ್ನುತ್ತಿದ್ದರು. ಮಾತಿನಷ್ಟೇ ಸತ್ಯವಾಗಿತ್ತು ಅವರ ನಡವಳಿಕೆ. ಒಂದು ದಿನ ಅವರು, ಇಂದು ತಮ್ಮ ದೇಹವನ್ನು ತೊರೆಯುತ್ತೇನೆಂದರು. ವೇದಗಳ ಪವಿತ್ರತಮ ಮಂತ್ರಗಳನ್ನು ಉಚ್ಚರಿಸುತ್ತ ಸಮಾಧಿಸ್ಥರಾಗಿ ದೇಹವನ್ನು ತ್ಯಜಿಸಿದರು. ▸

# ಆದರ್ಶ ಗುರುವಾಗಿ ಶ್ರೀರಾಮಕೃಷ್ಣ

ಸ್ವಾಮಿ ಸೋಮನಾಥಾನಂದ

ಜೀವನದಲ್ಲಿ 'ಗುರು' ಪದವಿಗೆ ಹಲವರು ತವಕ ಪಡುವರು, ಆದರೆ ಅದಕ್ಕೆ ಯೋಗ್ಯತೆ ಎಲ್ಲೊ ಕೆಲವರಲ್ಲಿ ಇದೆ. ಶ್ರೀರಾಮಕೃಷ್ಣರೇ ಈ ಒಂದು ಕಥೆಯನ್ನು ಹೇಳುತ್ತಾರೆ: ಒಬ್ಬ ಶಿಷ್ಯ ಗುರುವಿನ ಹತ್ತಿರ ಬಂದ. "ತನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ" ಎಂದ. ಗುರು ಶಿಷ್ಯನಿಗೆ, "ನೋಡು, ಶಿಷ್ಯವೃತ್ತಿ ತುಂಬಾ ಕಷ್ಟ. ಬೆಳಗ್ಗೆ ಬೇಗ ಏಳಬೇಕು. ಎಲ್ಲಾ ಕೆಲಸಮಾಡಬೇಕು, ಕಾಡಿಗೆ ಹೋಗಿ ಸೌದೆ ತರಬೇಕು, ಸಾಯಂಕಾಲದ ತನಕ ಏನಾದರೂ ಕೆಲಸ ಇದ್ದೇ ಇರುವುದು" ಎಂದರು. ಶಿಷ್ಯ, "ಹಾಗಾದರೆ ಗುರು ಏನು ಮಾಡುತ್ತಾನೆ?" ಎಂದು ಕೇಳಿದ. "ಮಧ್ಯೆ ಮಧ್ಯೆ ಉಪದೇಶ ಮಾಡುತ್ತಾನೆ" ಎಂದರು ಗುರು. "ಹಾಗಾದರೆ ನೀವು ಒಂದೇ ಸಲ ನನ್ನನ್ನು ಗುರುವನ್ನಾಗಿ ಮಾಡಿ" ಎಂದು ಕೇಳಿಕೊಂಡ. ಇದೇನೋ ನೋಡುವುದಕ್ಕೆ ತಮಾಷೆಯಾಗಿ ಕಾಣಬಹುದು. ಆದರೆ ನಾವು ನೋಡುವ ಅನೇಕರು ಈ ಗುಂಪಿಗೆ ಸೇರಿದ್ದಾರೆ. ಗುರುವಾಗುವುದು ತುಂಬಾ ಜವಾಬ್ದಾರಿಯ ಕೆಲಸ. ಹೇಗಾದರೂ ಕಷ್ಟಪಟ್ಟು ಸಾಧನೆಮಾಡಿ ಒಬ್ಬ ಉದ್ಧಾರವಾಗಬಹುದು. ಆದರೆ ಹೀಗೆ ಉದ್ಧಾರವಾದವರೆಲ್ಲ ಗುರುಗಳಾಗಲಾರರು. ಏಕೆಂದರೆ ಶಿಷ್ಯರಲ್ಲಿ ಒಬ್ಬನ ಯೋಗ್ಯತೆಯಂತೆ ಮತ್ತೊಬ್ಬನದು ಇರುವುದಿಲ್ಲ. ಅವರಲ್ಲಿ ವೈವಿಧ್ಯತೆ ಇರುವುದು. ಆ ವೈವಿಧ್ಯತೆಗೆ ಭಂಗ ಬರದಂತೆ ಗುರು ತನ್ನ ಕೆಲಸವನ್ನು ಮಾಡಬೇಕಾಗಿದೆ. 'ಎಲ್ಲರಿಗೂ ಒಂದೇ ಮದ್ದು' ಎಂಬುದು ಇಲ್ಲಿ ನಡೆಯುವುದಿಲ್ಲ. ಗುರುವಿನ ಕೆಲಸ ತೋಟಗಾರನ ಕೆಲಸದಂತೆ. ಅವನು ಒಂದೊಂದು ಗಿಡವನ್ನು ಒಂದೊಂದು ರೀತಿ ಬೆಳೆಸುತ್ತಾ ಪ್ರತಿಯೊಂದರಿಂದಲೂ ಬೇರೆ ಬೇರೆ ಹೂವು ಹಣ್ಣುಗಳನ್ನು ನಿರೀಕ್ಷಿಸುತ್ತಾನೆ. ಅದರಂತೆಯೇ ಒಂದು ಜೀವಿಗೆ ಅವನ ಭಾವನೆ ನಷ್ಟಮಾಡದೆ ಮುಂದುವರಿಯುವುದಕ್ಕೆ ಗುರುವು ಪ್ರೋತ್ಸಾಹ ನೀಡಬೇಕು.



ಇದಕ್ಕೆ ಮುಂಚೆ ಗುರುವಿಗೆ ಯೋಗ್ಯತೆ ಇರಬೇಕು. ಅವನು ಸತ್ಯ ಸಾಕ್ಷಾತ್ಕಾರವನ್ನು ಮಾಡಿಕೊಂಡಿರಬೇಕು. ಅವನಿಗೆ ಶಾಸ್ತ್ರಗಳ ಸಾರವೆಲ್ಲ ಗೊತ್ತಿರಬೇಕು. ಅವನ ಹೃದಯ ಪರಿಶುದ್ಧವಾಗಿರಬೇಕು; ಅವನು ಶಿಷ್ಯನ 'ವಿತ್ತ' ಎಂದರೆ ಲೌಕಿಕ ಧನ, ಸಂಪತ್ತುಗಳನ್ನು ಅಪೇಕ್ಷಿಸುವವನಾಗಬಾರದು. ಶಿಷ್ಯನ ಉದ್ಧಾರವೇ ಗುರುವಿನ ಏಕಮಾತ್ರ ಗುರಿಯಾಗಿರಬೇಕು. ಆದರೆ ಇದನ್ನು ಶಿಷ್ಯನಿಗೆ ಕಲಿಸಿಕೊಡುವ ಕಲೆ ಗೊತ್ತಿರಬೇಕು. ಶಿಷ್ಯನ ಮಟ್ಟಕ್ಕೆ ಗುರು ಇಳಿದು ಬರಬೇಕು. ಅವನ ಸಂದೇಹ, ಕಷ್ಟ, ದುಃಖಗಳನ್ನು ಗುರು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರಬೇಕು. ಆಗ ಮಾತ್ರ ಅವನಿಗೆ ತಕ್ಕ ಬೋಧನೆಯನ್ನು ಗುರು ಮಾಡಬಲ್ಲ. ಶ್ರೀರಾಮಕೃಷ್ಣರೇ ಹೇಳುತ್ತಿದ್ದರು: ಹಾಲು ಎಲ್ಲರಿಗೂ ಬೇಕು, ನಿಜ. ಆದರೆ ಒಬ್ಬೊಬ್ಬರಿಗೆ ಒಂದೊಂದು ರೀತಿ ಕೊಡಬೇಕು. ಮಗುವಿಗೆ ನೀರು ಬೆರೆಸಿ ಕೊಡಬೇಕು; ಪೈಲ್ವಾನನಿಗೆ ಅದನ್ನು ಇಂಗಿಸಿ ಕೊಡಬೇಕು; ಟೈಫಾಯಿಡ್ ರೋಗಿಗೆ ಹಾಲನ್ನು ಒಡೆದು ಅದರ ನೀರನ್ನು ಮಾತ್ರ ಕೊಡಬೇಕು; ಆಮಶಂಕೆ ಇರುವವನಿಗೆ ಹಾಲನ್ನು ಮೊಸರು ಮಾಡಿ, ಬೆಣ್ಣೆ ತೆಗೆದು ಬರೀ ಮಜ್ಜಿಗೆ ಕೊಡಬೇಕು. ಹಾಲೊಂದನ್ನೇ ಇಲ್ಲಿ ಬೇರೆ ಬೇರೆ ವಿಧದಲ್ಲಿ ಕೊಡಬೇಕಾಗುತ್ತದೆ. ಅದರಂತೆಯೇ

ಶ್ರೀರಾಮಕೃಷ್ಣರು ಅತಿ ಸಮರ್ಥ ಗುರುಗಳು. ಜಗದ್ಗುರುವಾದ ಇವರು ತಮ್ಮ ಶಿಷ್ಯರ ಮಟ್ಟಕ್ಕೆ ಬಂದು ಬೋಧಿಸುತ್ತಿದ್ದರು. ಪ್ರತಿಯೊಬ್ಬರ ಅಂತರಂಗದ ಪರೀಕ್ಷೆ ಮಾಡಿ ಅದಕ್ಕೆ ತಕ್ಕ ಪರಿಹಾರ ಸೂಚಿಸುತ್ತಿದ್ದರು. ಈ ಅಂಶವನ್ನು ಸ್ವಾರಸ್ಯಕರವಾಗಿ ಬಿಂಬಿಸಿರುವ ಪೂಜ್ಯ ಸ್ವಾಮೀಜಿಯವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಹಿಂದಿನ ಅಧ್ಯಕ್ಷರು; ಕನ್ನಡ ಜನಕ್ಕೆ ರಾಮಕೃಷ್ಣ-ವಿವೇಕಾನಂದ ಭಾವಧಾರೆಯನ್ನು ಪರಿಚಯಿಸಿದ ಮಹನೀಯರು. ಇವರ 'ಗುರುದೇವ ಶ್ರೀರಾಮಕೃಷ್ಣ' ಪುಸ್ತಕದಿಂದ ಈ ಭಾಗವನ್ನು ಸಂಗ್ರಹಿಸಲಾಗಿದೆ.

ಉಪದೇಶದಲ್ಲಿ ವೈವಿಧ್ಯತೆ ಇರಬೇಕು. ಪ್ರತಿಯೊಬ್ಬನ ಜೀರ್ಣಶಕ್ತಿಯೂ ಒಂದೇ ಸಮನಾಗಿ ಇರುವುದಿಲ್ಲ. ಒಬ್ಬನದು ಭಕ್ತನ ಸ್ವಭಾವ; ಮತ್ತೊಬ್ಬನದು ಜ್ಞಾನಿಯ ಸ್ವಭಾವ; ಇನ್ನೊಬ್ಬನದು ಕರ್ಮಿಯ ಸ್ವಭಾವ. ಒಬ್ಬನಿಗೆ ಅದ್ವೈತ ಜ್ಞಾನವೇ ಹಿಡಿಸುವುದು; ಇನ್ನೊಬ್ಬನಿಗೆ ದ್ವೈತ; ಒಬ್ಬನಿಗೆ ಸಾಕಾರ ದೇವರು ಬೇಕು; ಮತ್ತೊಬ್ಬನಿಗೆ ನಿರ್ಗುಣ. ಒಬ್ಬನಿಗೆ ಮಾನವೀಯ ಸ್ವಭಾವ ಬೇಕು; ಇನ್ನೊಬ್ಬ ದೈವಿಕ ಮಟ್ಟದಲ್ಲಿರುತ್ತಾನೆ. ಶ್ರೀರಾಮಕೃಷ್ಣರು ಎಲ್ಲಾ ತತ್ತ್ವ, ಯೋಗ, ಭಾವ, ಧರ್ಮ, ಸಗುಣ, ನಿರ್ಗುಣ ಇವುಗಳನ್ನೆಲ್ಲಾ ಅನುಭವಿಸಿದ್ದುದರಿಂದ ಶಿಷ್ಯರ ಭಾವವನ್ನು ನಷ್ಟ ಮಾಡದೆ, ಅವರನ್ನು ಮೆಟ್ಟಲು ಮೆಟ್ಟಲಾಗಿ ಮುಂದಕ್ಕೆ ಕರೆದುಕೊಂಡು ಹೋಗುವುದಕ್ಕೆ ಸಾಧ್ಯವಾಯಿತು.

ಗುರುವಿನ ಕೆಲಸ ಬರೀ ಮಂತ್ರವನ್ನು ಶಿಷ್ಯನ ಕಿವಿಗೆ ಊದಿದರೆ ಮುಗಿದು ಹೋಗುವುದಿಲ್ಲ. ತನ್ನ ಆಧ್ಯಾತ್ಮಿಕ ಶಕ್ತಿಯನ್ನು ಶಿಷ್ಯನಿಗೆ ಧಾರೆ ಎರೆಯುವನು. ಹೀಗೆ ಕೊಡಲು ಅವನು ಅದನ್ನು ಪಡೆದುಕೊಂಡಿರಬೇಕು. ಆಧ್ಯಾತ್ಮಿಕ ಶಕ್ತಿಯನ್ನು ಒಬ್ಬ ಮತ್ತೊಬ್ಬನಿಗೆ ಕೊಡಬೇಕಾದರೆ, ಅದು ಹರಿಯಲು ಒಂದು ಮಧ್ಯವರ್ತಿ(ಮೀಡಿಯಮ್) ಬೇಕು. ಅದೇ ಪ್ರೇಮ. ಶ್ರೀರಾಮಕೃಷ್ಣರಿಗೆ ತಮ್ಮ ಶಿಷ್ಯರಲ್ಲಿ ಅಸೀಮವಾದ ಪ್ರೇಮವಿತ್ತು. ಅವರು ಶಿಷ್ಯರನ್ನು ಪ್ರೀತಿಸುತ್ತಿದ್ದಂತೆ, ತಾಯಿ ತನ್ನ ಮಗುವನ್ನು ಪ್ರೀತಿಸಲಾರಳು. ಪ್ರಿಯಕರ ತನ್ನ ಪ್ರೇಯಸಿಯನ್ನು ಪ್ರೀತಿಸಲಾರನು. ಒಮ್ಮೆ ಅವರ ಪ್ರೇಮದ ಸವಿಯನ್ನು ರುಚಿ ನೋಡಿದವನಿಗೆ ಉಳಿದ ಪ್ರೀತಿಗಳೆಲ್ಲವೂ ಸಪ್ಪೆಯಾಗುತ್ತಿದ್ದುವು. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ವಿಜ್ಞಾನಾನಂದರನ್ನು ಒಮ್ಮೆ ಕಂಡಿದ್ದೆ. ಅವರನ್ನು ಕೇಳಿದೆ, "ನಿಮಗೆ ಶ್ರೀರಾಮಕೃಷ್ಣರಲ್ಲಿ ತುಂಬಾ ಆಕರ್ಷಣೀಯವಾದ ಭಾವ ಯಾವುದು?" ಎಂದು. ಅವರು ಹೇಳಿದರು, "ಅವರ ಸಮಾಧಿ ಮುಂತಾದುವನ್ನು ನಾನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ; ಆದರೆ ಅವರು ನನಗೆ ಪ್ರೀತಿ ತೋರಿಸಿದ್ದನ್ನು ನಾನು ಎಂದೆಂದಿಗೂ ಮರೆಯುವುದಿಲ್ಲ. ನಾನು ಅವರನ್ನು ಪ್ರಥಮ ಬಾರಿಗೆ ಕಂಡಾಗಲೇ, ಹಲವು ಜನ್ಮಗಳ ಸ್ನೇಹಿತನೋ ಎಂಬಂತೆ ನನ್ನನ್ನು ಪ್ರೀತಿಸಿದರು, ಆದರಿಸಿದರು. ನಾನು ಅವರ ಪ್ರೇಮದ ದಾಸ." ಇದರಿಂದ ಶ್ರೀರಾಮಕೃಷ್ಣರು ತಮ್ಮ ಬಳಿಗೆ ಬಂದ ಶಿಷ್ಯರನ್ನು ಎಷ್ಟರಮಟ್ಟಿಗೆ ಪ್ರೀತಿಸಿದರು ಎಂಬುದು ಅರ್ಥವಾಗುತ್ತದೆ. ನರೇಂದ್ರನಂತಹ ಮೇಧಾವಿಯನ್ನು ಮಾತ್ರವಲ್ಲ, ಲಾಟುವಿನಂತಹ ನಿರಕ್ಷರಕುಕ್ಷಿಯನ್ನೂ ಅಷ್ಟೇ ಪ್ರೀತಿಸಿದರು. ಲಾಟುವಿನ ಒಂದು ಚಪ್ಪಲಿ ಎಲ್ಲೋ ಕಳೆದುಹೋದಾಗ ಬೆಳಿಗ್ಗೆ ಅಷ್ಟು ಹೊತ್ತಿಗೇ ಎದ್ದು, ದಕ್ಷಿಣೇಶ್ವರದ ಗಿಡ, ಮರ, ಪೊದೆಗಳಲ್ಲಿ ಶ್ರೀರಾಮಕೃಷ್ಣರು ಹುಡುಕುತ್ತಿದ್ದರು ಎಂದು ಕೇಳಿದಾಗ ಅವರ ನಿರಭಿಮಾನ, ಶಿಷ್ಯ ವಾತ್ಸಲ್ಯಗಳ ಆಳ ನಮಗೆ ತಿಳಿದುಬರುವುದು. ಹಾಗೆಯೇ "ನಾನು ಮಾಡದೇ ಇರುವ ಕೆಟ್ಟ ಕೆಲಸವೇ ಇಲ್ಲ" ಎಂದು ಹೆಮ್ಮೆ ಕೊಚ್ಚಿಕೊಳ್ಳುತ್ತಿದ್ದ ಗಿರೀಶನನ್ನೂ ಪ್ರೀತಿಸಿದರು. ಶ್ರೀರಾಮಕೃಷ್ಣರ ಬತ್ತಳಿಕೆಯಲ್ಲಿ ಮಹಾಸ್ತ್ರಗಳಿದ್ದವು. ಅದರಲ್ಲಿ 'ಪ್ರೀತಿ' ಎಂಬುದು ಮಹಾಸ್ತ್ರ, ಬ್ರಹ್ಮಾಸ್ತ್ರ; ಅದಕ್ಕೆ ಎಲ್ಲರೂ ವಶವಾಗುತ್ತಿದ್ದರು. ಅದು ಅಂತಹ ಸಮ್ಮೋಹನಾಸ್ತ್ರ!

ಶ್ರೀರಾಮಕೃಷ್ಣರು ತಮ್ಮ ಶಿಷ್ಯರಿಗೆ ಆಧ್ಯಾತ್ಮಿಕ ಜೀವನದ ರುಚಿಯನ್ನು ತೋರಿಸುತ್ತಿದ್ದರು. ಆದರೆ ಅದು ಬರೀ ರುಚಿ ತೋರಿಸಿ ಅವರನ್ನು ತಾತ್ಕಾಲಿಕವಾಗಿ ಸಂತೋಷಪಡಿಸುವುದಕ್ಕಲ್ಲ; ಆ ಸವಿಯನ್ನು ಎಂದೆಂದಿಗೂ ತಮ್ಮದನ್ನಾಗಿ ಮಾಡಿಕೊಳ್ಳಬೇಕು ಎಂಬ ಬಯಕೆಯ ಹೋರಾಟವನ್ನು ಅವರಲ್ಲಿ ಬಿತ್ತುವುದಕ್ಕೆ. ಶಿಷ್ಯರನ್ನು ತಮ್ಮ ಸ್ವಂತ ಕಾಲುಗಳ ಮೇಲೆ ನಿಂತು ಸಾಧನೆ ಮಾಡುವಂತೆ ಮಾಡಿದರು. ಶ್ರೀರಾಮಕೃಷ್ಣರ ಕೃಪೆಯಿಂದ ಶಿಷ್ಯರಿಗೆ ಆಧ್ಯಾತ್ಮಿಕ ಅನುಭವಗಳು ಮಿಂಚಿನಂತೆ ಉಂಟಾಗಿ ಅದರ ರುಚಿಯ ಅನುಭವವಾಯಿತು. ಆ ಅನುಭವವನ್ನು ಗಟ್ಟಿಯಾಗಿ ತಮ್ಮ ದಿನನಿತ್ಯದ ಅನುಭವವನ್ನಾಗಿ ಮಾಡಿಕೊಳ್ಳಲು ಸಾಧನೆ ಅವಶ್ಯಕವಾಯಿತು. ಶ್ರೀರಾಮಕೃಷ್ಣರು ಈ ಅನುಭವಗಳ ರುಚಿ ತೋರಿಸಿದ್ದರಿಂದ, 'ಎಷ್ಟೇ ಕಷ್ಟವಾಗಲಿ, ಅದನ್ನು ಪಡೆಯಲೇಬೇಕು' ಎಂಬ ದೃಢ ಸಂಕಲ್ಪ ಶಿಷ್ಯರಿಗೆ ಉಂಟಾಯಿತು.

ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಮೇಲೆ ಯಾವುದೇ ಭಾವವನ್ನಾಗಲೀ, ಇಷ್ಟವನ್ನಾಗಲೀ ಬಲತ್ಕಾರ ಮಾಡಿ ಹೊರಿಸುತ್ತಿರಲಿಲ್ಲ. ಅವರವರ ಭಾವವನ್ನೇ ವೃದ್ಧಿಪಡಿಸಲು ಸಾಕಷ್ಟು ಪ್ರೋತ್ಸಾಹ, ಸ್ವಾತಂತ್ರ್ಯಗಳನ್ನು ಕೊಡುತ್ತಿದ್ದರು. ಅದು ತಪ್ಪುದಾರಿಗೆ ಹೋದಾಗ ಮಾತ್ರ ಅವರನ್ನು ತಿದ್ದುತ್ತಿದ್ದರು.

ಶ್ರೀರಾಮಕೃಷ್ಣರು ಶಶಿಗೆ, "ನಿನಗೆ ಸಾಕಾರದಲ್ಲಿ ನಂಬಿಕೆಯೆ, ನಿರಾಕಾರದಲ್ಲಿ ನಂಬಿಕೆಯೆ?" ಎಂದು ಕೇಳುತ್ತಾರೆ. ಅವನು "ನನಗೆ ದೇವರಿರುವುದರಲ್ಲೇ ನಂಬಿಕೆಯಿಲ್ಲ" ಎನ್ನುತ್ತಾನೆ. ಆಗ ಶ್ರೀರಾಮಕೃಷ್ಣರು, "ಹೌದು! ಆಧ್ಯಾತ್ಮಿಕ ಜೀವನದ ವಿಕಸನದಲ್ಲಿ ಇದೊಂದು ಮೆಟ್ಟಲು, ಆದರೆ ಇದೇ ಸೇರಬೇಕಾದ ಗುರಿಯಲ್ಲ. ನರೇಂದ್ರನೂ ಹೀಗೆ ಹೇಳುತ್ತಿದ್ದ; ಈಗ ದೇವರ ಹೆಸರನ್ನು ಕೇಳಿದರೆ ಕಣ್ಣೀರು ಸುರಿಸುವನು. ಆದರೆ ದೇವರಿಗೆ ನೀನು ಹೀಗೆ ಪ್ರಾರ್ಥನೆ ಮಾಡಬಹುದಲ್ಲ, 'ದೇವರೇ, ನೀನು ಒಂದು ವೇಳೆ ಏನಾದರೂ ಇದ್ದದ್ದೇ ಆದರೆ ನನ್ನ ಪ್ರಾರ್ಥನೆಯನ್ನು ಕೇಳು' " ಎಂದರು.

ಶರತ್‌ನನ್ನು ಕೇಳಿದರು, "ನೀನು ದೇವರ ಯಾವ ಆಕಾರದ ಮೇಲೆ ಧ್ಯಾನಿಸಬೇಕೆಂದು ಇಚ್ಛಿಸುವೆ?" ಎಂದು. ಅದಕ್ಕೆ ಅವನು, "ನಾನು ಆಕಾರ ಗೀಕಾರದ ಮೇಲೆ ಧ್ಯಾನಿಸುವುದಕ್ಕೆ ಇಚ್ಛಿಸುವುದಿಲ್ಲ; ಎಲ್ಲಾ ಕಡೆ, ಎಲ್ಲಾ ವಸ್ತುಗಳ ಹಿಂದೆ ಅವನೇ ಇರುವವನು ಎಂಬುದನ್ನು ನಾನು ಅನುಭವಿಸಬೇಕು" ಎನ್ನುತ್ತಾನೆ. ಅದಕ್ಕೆ ಶ್ರೀರಾಮಕೃಷ್ಣರು, "ನೋಡು, ಇದು ಆಧ್ಯಾತ್ಮಿಕ ಜೀವನದಲ್ಲಿ ಕೊನೆಯ ಮೆಟ್ಟಲು; ಅದು ಈಗಲೇ ಹೇಗೆ ಬರುವುದು?" ಎನ್ನುತ್ತಾರೆ. "ಕೆಳಗಿನ ಮೆಟ್ಟಲುಗಳು ನನಗೆ ಹಿಡಿಸುವುದೇ ಇಲ್ಲ" ಎನ್ನುತ್ತಾನೆ ಶರತ್.

ಶ್ರೀರಾಮಕೃಷ್ಣರು ಅವನನ್ನು ಬಲಾತ್ಕರಿಸುವುದಿಲ್ಲ, ನಿರಾಶೆಗೊಳಿಸುವುದೂ ಇಲ್ಲ; "ಭಗವತಿ ನಿನ್ನ ಅಭೀಷ್ಟವನ್ನು ನೆರವೇರಿಸಲಿ" ಎನ್ನುವರು.

'ನಿರಂಜನ' ಎಂಬ ಶಿಷ್ಯ ಬಹಳ ಉಗ್ರಸ್ವಭಾವದವನು; ಒಂದು ಸಲ ಅವನು ದೋಣಿಯಲ್ಲಿ ದಕ್ಷಿಣೇಶ್ವರಕ್ಕೆ ಬರುತ್ತಿದ್ದ. ದೋಣಿಯಲ್ಲಿದ್ದವರು ಶ್ರೀರಾಮಕೃಷ್ಣರನ್ನು ನಿಂದಿಸತೊಡಗಿದರು. ನಿರಂಜನ ಕೂಡಲೇ ಎದ್ದು ದೋಣಿಯಲ್ಲಿ ಒಂದು ಮೂಲೆಗೆ ನಿಂತು, ಅದನ್ನು ತನ್ನ ಭಾರವನ್ನೆಲ್ಲಾ ಬಿಟ್ಟು ಅಲ್ಲಾಡಿಸುತ್ತಾ, "ನೀವು ಹಾಗೆ ಅವರನ್ನು ನಿಂದಿಸುತ್ತಿದ್ದರೆ, ಈ ದೋಣಿಯನ್ನು ಮುಳುಗಿಸಿ ನಿಮ್ಮನ್ನೆಲ್ಲಾ ನೀರುಪಾಲು ಮಾಡುತ್ತೇನೆ" ಎಂದು ಆರ್ಭಟಿಸಿದ. ದೋಣಿಯಲ್ಲಿದ್ದವರಿಗೆ ಅಂಜಿಕೆಯಾಗಿ ಸುಮ್ಮನಾದರು. ದಕ್ಷಿಣೇಶ್ವರಕ್ಕೆ ಬಂದಾಗ ನಡೆದ ಸಮಾಚಾರವನ್ನು ಶ್ರೀರಾಮಕೃಷ್ಣರಿಗೆ ತಿಳಿಸಿದ. ಆಗ ಶ್ರೀರಾಮಕೃಷ್ಣರು, "ನೋಡಿದೆಯಾ ಕೋಪದ ಭರದಲ್ಲಿ ನೀನು ಎಂತಹ ಪಾಪಕೃತ್ಯವನ್ನು ಮಾಡುತ್ತಿದ್ದೆ! ಕೋಪ ಮನುಷ್ಯನ ಪರಮಶತ್ರು; ಅವರು ನಿಂದಿಸಿದರೆ ನನಗೇನಾಗು ವುದು?" ಎಂದರು. ಇಲ್ಲಿ ನಿರಂಜನ ಬಹಳ ಕೋಪಿಷ್ಠನಾದುದರಿಂದ ಅವನ ಕೋಪವನ್ನು ತಗ್ಗಿಸಲು ಹೀಗೆ ಹೇಳಿದರು. ಆದರೆ ಎಲ್ಲರಿಗೂ ಒಂದೇ ಉಪದೇಶವನ್ನು ಕೊಡುತ್ತಿರಲಿಲ್ಲ.

'ಯೋಗಿನ್' ಎಂಬುವವನು ಬಹಳ ಮೃದು ಸ್ವಭಾವದವನು. ಬರೀ ಮೃದು ಸ್ವಭಾವವಷ್ಟೇ ಅಲ್ಲ, ಸ್ವಲ್ಪ ಅಂಜುಕುಳಿತನವೂ ಇತ್ತು. ಅವನು ಒಮ್ಮೆ ದಕ್ಷಿಣೇಶ್ವರಕ್ಕೆ ಬರುತ್ತಿದ್ದಾಗ ಸಹ ಯಾತ್ರಿಕರು ಶ್ರೀರಾಮಕೃಷ್ಣರನ್ನು ಹೀಯಾಳಿಸುತ್ತಿದ್ದರು. ಇವನು ಕೇಳಿಕೊಂಡು ಸುಮ್ಮನೆ ಬಂದ, ಎಲ್ಲಿ ಏನಾದರೂ ಉತ್ತರ ಕೊಟ್ಟರೆ ದೊಡ್ಡ ಗಲಾಟೆಯಾಗಿಬಿಡುವುದೋ ಎಂದು ಹೆದರಿ! ಈ ವಿಷಯ ಗೊತ್ತಾದಾಗ, ಶ್ರೀರಾಮಕೃಷ್ಣರು ಅವನ ಅಂಜುಗುಳಿತನವನ್ನು ಹೋಗಲಾಡಿಸಲು, "ಗುರುನಿಂದೆ ಮಾಡುತ್ತಿದ್ದರೆ ನೀನು ಸುಮ್ಮನೆ ಕೇಳಿ ಕೊಂಡಿದ್ದೆಯಾ? ಅವರನ್ನು ಖಂಡಿಸಬೇಕಾಗಿತ್ತು ಅಥವಾ ದೋಣಿಯನ್ನು ದಡದಲ್ಲಿ ನಿಲ್ಲಿಸುವಂತೆ ಹೇಳಿ, ಗುರುನಿಂದೆಯಾಗುವ ಸ್ಥಳ ವನ್ನಾದರೂ ಬಿಟ್ಟುಬರಬೇಕಾಗಿತ್ತು" ಎನ್ನುತ್ತಾರೆ.

ಮತ್ತೊಬ್ಬ ಭಕ್ತ ತಿಗಣೆ, ಸೊಳ್ಳೆಗಳನ್ನು ಕೊಲ್ಲುವುದೇ ಬೇಡವೇ ಎಂಬ ವಿಷಯದಲ್ಲಿ ಶ್ರೀರಾಮಕೃಷ್ಣರು ಏನು ಹೇಳುತ್ತಾರೋ ಕೇಳೋಣವೆಂದು ಬಂದ. ಅದೇ ಸಮಯಕ್ಕೆ ಶ್ರೀರಾಮಕೃಷ್ಣರು, ತಮ್ಮ ಹಾಸಿಗೆ ದಿಂಬುಗಳನ್ನು ಬಿಸಿಲಲ್ಲಿ ಹಾಕಿ, ಅದರಲ್ಲಿರುವ ತಿಗಣೆಗಳನ್ನು ಕೊಲ್ಲುತ್ತಿದ್ದರು. ಇವನಿಗೆ ಕೇಳುವ ಹಾಗೆ ಅವರು ಹೇಳಿದರು, "ನೋಡು, ತಿಗಣೆ ಕಡಿದರೆ ಮನಸ್ಸು ದೇಹದ ಮೇಲೆ ಬರುವುದು; ದೇವರ ಧ್ಯಾನಕ್ಕೆ ಅದೊಂದು ಆತಂಕ; ಅದಕ್ಕೇನೇ ಇವುಗಳನ್ನು ಕೊಲ್ಲುತ್ತಿದ್ದೇನೆ." ಇನ್ನೊಬ್ಬ ಹುಡುಗನಿಗೆ ಸದಾ ಮೀನುಗಳನ್ನು ಹಿಡಿಯುವ ಹವ್ಯಾಸ; ದಕ್ಷಿಣೇಶ್ವರಕ್ಕೆ ಬಂದಾಗಲೂ ಅವನು ಮೀನುಗಳನ್ನು ಹಿಡಿಯುತ್ತಿದ್ದ. ಒಂದು ದಿನ ಶ್ರೀರಾಮ ಕೃಷ್ಣರು, "ಏತಕ್ಕೆ ಪ್ರಾಣಿಹಿಂಸೆ ಮಾಡುತ್ತಿರುವೆ?" ಎಂದು ಕೇಳಿದರು. ಅದಕ್ಕೆ ಅವನು, "ಯಾರು ಯಾರನ್ನು ಕೊಲ್ಲುತ್ತಾರೆ? ಆತ್ಮವನ್ನು ಯಾರೂ ಏನೂ ಮಾಡುವುದಕ್ಕೆ ಆಗುವುದಿಲ್ಲ" ಎಂದು ದೊಡ್ಡ ವೇದಾಂತವನ್ನೇ ಹೇಳುತ್ತಾನೆ. ಆಗ ಶ್ರೀರಾಮಕೃಷ್ಣರು, "ಯಾವನು ಎಲ್ಲಾ ಭೂತಗಳಲ್ಲಿಯೂ ತನ್ನ ಆತ್ಮವೇ ಇದ್ದಾನೆ ಎಂಬುದನ್ನು ಅನುಭವಿಸಬಲ್ಲನೋ, ಅವನು ಒಂದು ಪ್ರಾಣಿಗೂ ಹಿಂಸೆ ಕೊಡಲಾರ" ಎನ್ನುವರು.

ಜೀವನದಲ್ಲಿ ದೊಡ್ಡ ದೊಡ್ಡ ತತ್ತ್ವಗಳನ್ನು ತಿಳಿದುಕೊಂಡಿರುವುದಲ್ಲ ನಮ್ಮನ್ನು ರಕ್ಷಿಸುವುದು, ಏನನ್ನು ಜೀವನದಲ್ಲಿ ಅರಗಿಸಿಕೊಂಡಿ ದ್ದೇವೋ ಅವು ಮಾತ್ರ ನಮ್ಮವು; ಮಿಕ್ಕಿರುವುದೆಲ್ಲ ಪರೀಕ್ಷಾ ಸಮಯ ಬಂದಾಗ ನಮ್ಮನ್ನು ಬಿಟ್ಟು ಓಡುವುದು. ಇದನ್ನು ನಿರ್ದೇಶಿಸಲು ಶ್ರೀರಾಮಕೃಷ್ಣರು ಒಂದು ಪ್ರಸಂಗವನ್ನು ಹೇಳುತ್ತಾರೆ: ಒಬ್ಬ ಪಂಡಿತ ದೋಣಿಯಲ್ಲಿ ಗಂಗಾನದಿ ದಾಟುತ್ತಿದ್ದ. ಅವನೊಬ್ಬನೇ ಇದ್ದ, ಕೂತು ಕೂತು ಬೇಜಾರಾಯಿತು. ದೋಣಿಯವನೊಂದಿಗೆ ಮಾತಾಡಲು ಪ್ರಾರಂಭ ಮಾಡಿದ. "ಏನಯ್ಯಾ! ನೀನು ಬರೀ ದೋಣಿ ನಡೆಸುವುದರಲ್ಲಿ ಕಾಲ ಕಳೆದೆಯೋ ಅಥವಾ ಏನಾದರೂ ನ್ಯಾಯ ಗೀಯ ಓದಿದೆಯೋ?" ಎಂದು ಕೇಳಿದ. ನಾವಿಕ, "ಇಲ್ಲ ಸ್ವಾಮಿ" ಎಂದ. "ನಿನ್ನ ಜೀವನದ ಕಾಲುಭಾಗ ಹಾಳಾಯಿತು" ಎಂದ ಪಂಡಿತ. "ನಿನಗೇನಾದರೂ ವ್ಯಾಕರಣ ಗೊತ್ತೋ?" ಎಂದು ಕೇಳಿದ. "ಇಲ್ಲ" ಎಂದ ಆ ದೋಣಿಯವನು. "ನಿನ್ನ ಜೀವನದ ಅರ್ಧಭಾಗ ಹಾಳಾಯಿತು" ಎಂದ ಆ ಪಂಡಿತ. ಮತ್ತೆ, "ನಿನಗೇನಾದರೂ ಸಾಹಿತ್ಯವಾದರೂ ಸ್ವಲ್ಪ ಗೊತ್ತಿದೆಯೇ?" ಎಂದ. ದೋಣಿಯವ "ಇಲ್ಲ" ಎಂದ. "ನಿನ್ನ ಜೀವನದ ಮುಕ್ಕಾಲು ಪಾಲು ವ್ಯರ್ಥ ವಾಯಿತು" ಎಂದ ಪಂಡಿತ. ಅಷ್ಟು ಹೊತ್ತಿಗೆ ದೊಡ್ಡ ಬಿರುಗಾಳಿ ಎದ್ದಿತು. ದೋಣಿ ಮುಳುಗಲು ಪ್ರಾರಂಭವಾಯಿತು. ಆಗ ದೋಣಿ ಯವನು ಪಂಡಿತನನ್ನು ಕೇಳುತ್ತಾನೆ, "ಸ್ವಾಮಿ! ನಿಮಗೇನಾದರೂ ಈಜಲು ಗೊತ್ತಿದೆಯೇ?" ಎಂದು. ಪಂಡಿತ "ಇಲ್ಲ" ಎಂದಾಗ, "ನಿಮ್ಮ ಜೀವನ ಪೂರ್ಣ ಹಾಳಾಯಿತು" ಎಂದ ಆ ನಾವಿಕ!

ಶ್ರೀರಾಮಕೃಷ್ಣರು ಮನೋದೌರ್ಬಲ್ಯದೊಂದಿಗೆ ಹೋರಾಡುವುದಕ್ಕೆ ಒಂದು ಸುಲಭವಾದ ಮಾರ್ಗವನ್ನು ಹೇಳಿಕೊಡುತ್ತಾರೆ. ಅದೇ, ದೌರ್ಬಲ್ಯಗಳನ್ನೂ ದೇವರ ಕಡೆ ತಿರುಗಿಸುವುದು. ಗಿರೀಶ ಕುಡಿಯುತ್ತಿದ್ದ. ಎಷ್ಟು ಪ್ರಯತ್ನ ಮಾಡಿದರೂ ಬಿಡುವುದಕ್ಕೆ ಆಗಲಿಲ್ಲ; ಶ್ರೀರಾಮಕೃಷ್ಣರು, "ನೀನು ಭಗವತಿಗೆ ಅರ್ಪಿಸಿ ಕುಡಿ" ಎನ್ನುತ್ತಾರೆ. ಕ್ರಮೇಣ ಮನಸ್ಸು, ಅರ್ಪಿಸುವ ವಸ್ತುವಿನಿಂದ ಅರ್ಪಿಸಿದ ದೇವರ ಕಡೆಗೆ ವಾಲುವುದು. ಮತ್ತೊಬ್ಬ ವೇಶ್ಯೆಯ ಮನೆಗೆ ಹೋಗುತ್ತಿದ್ದ. "ನೀನು ಹೋಗುವಾಗ ಭಗವತಿಯ ನಾಮವನ್ನು ಚಿಂತಿಸುತ್ತ ಹೋಗು" ಎನ್ನುತ್ತಾರೆ, ಹಾಗೆ ಒಂದು ದಿನ ಅವನಿಗೆ ನಾಚಿಕೆ ಬಂದು ಹಿಂದಿರುಗುತ್ತಾನೆ ಎಂದು. ಹೆಂಗಸೊಬ್ಬಳು "ನನಗೆ ಧ್ಯಾನದಲ್ಲಿ